# ಮೈಸೂರು ವಿಶ್ವವಿದ್ಯಾನಿಲಯ

**ದಿನಾಂಕ 25-02-2019ರ ಸೋಮವಾರದಂದು ಪೂರ್ವಾಹ್ನ 11.00 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ಜರುಗಿದ ಸಿಂಡಿಕೇಟಿನ ವಿಶೇಷ ಸಭೆಯ ನಡವಳಿಗಳು.**

**ಹಾಜರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ಜಿ. ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. | ಪ್ರೊ. ಮಹದೇವ | ಸದಸ್ಯರು |
| 3. | ಪ್ರೊ. ಎ. ಬಾಲಸುಬ್ರಮಣಿಯನ್ | ಸದಸ್ಯರು |
| 4. | ಶ್ರೀಮತಿ ಸಹನಾ ಶಿವಪ್ಪ | ಸದಸ್ಯರು |
| 5. | ಡಾ. ರಾಜಗೋಪಾಲ್ | ಸದಸ್ಯರು |
| 6. | ಡಾ. ಎಂ. ಪ್ರೀತಿ | ಸದಸ್ಯರು |
| 7. | ಶ್ರೀ ಜಿ. ಅಶ್ವಥನಾರಾಯಣ | ಸದಸ್ಯರು |
| 8. | ಶ್ರೀ ಕೆ.ಟಿ. ಅಪ್ಪಾಜಪ್ಪ | ಸದಸ್ಯರು |
| 9. | ಪ್ರೊ. ಕೆ.ಎಂ. ಮಹದೇವನ್ ಕುಲಸಚಿವ(ಪರೀಕ್ಷಾಂಗ) | ಸದಸ್ಯರು |
| 10. | ಪ್ರೊ. ಲಿಂಗರಾಜ ಗಾಂಧಿ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು |

**ಹಾಜರಾಗದ ಸದಸ್ಯರು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
3. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಮಾನ್ಯ ಕುಲಪತಿಗಳು ಸಿಂಡಿಕೇಟಿನ ವಿಶೇಷ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು. ನಂತರ ನೂತನವಾಗಿ ಕುಲಸಚಿವರಾಗಿ ಅಧಿಕಾರ ವಹಿಸಿಕೊಂಡಿರುವ ಪ್ರೊ. ಲಿಂಗರಾಜ ಗಾಂಧಿ ಅವರನ್ನು, ಕುಲಸಚಿವ (ಪರೀಕ್ಷಾಂಗ)ರಾಗಿ ಅಧಿಕಾರ ವಹಿಸಿಕೊಂಡಿರುವ ಪ್ರೊ. ಕೆ.ಎಂ. ಮಹದೇವನ್ ಹಾಗೂ ಕಲಾ ನಿಕಾಯದ ಡೀನ್‌ರಾಗಿರುವ ಇಂಗ್ಲಿಷ್ ಅಧ್ಯಯನ ವಿಭಾಗದ ಪ್ರೊ. ಮಹದೇವ್‌ರವರನ್ನು ಎಲ್ಲಾ ಸಿಂಡಿಕೇಟ್ ಸದಸ್ಯರುಗಳ ಪರವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸಿ ಸಭೆಗೆ ಪರಿಚಯಿಸಿದರು.

ನಂತರ ಮಾತನಾಡಿದ ಕುಲಸಚಿವರು ಸಭೆಯ ಸದಸ್ಯರೆಲ್ಲರಿಗೂ ಸ್ವಾಗತ ಕೋರಿ ಹಾಗೂ ನೂತನವಾಗಿ ನೇಮಕಗೊಂಡಿರುವ ಕುಲಸಚಿವ (ಪರೀಕ್ಷಾಂಗ)ರವರನ್ನು ಸ್ವಾಗತಿಸಿ, ಇನ್ನು ಮುಂದೆಯು ಸಹ ಎಲ್ಲರ ಸಹಾಯ ಸಹಕಾರ ನೀಡಬೇಕೆಂದು ಸಭೆಯನ್ನು ಕೋರಿದರು.

ಇದುವರೆವಿಗೂ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ಕಾರ್ಯನಿರ್ವಹಿಸಿದ್ದ ಪ್ರೊ. ಆರ್. ರಾಜಣ್ಣರವರ ಹಾಗೂ ಪ್ರೊ. ಜೆ. ಸೋಮಶೇಖರ್, ಕುಲಸಚಿವ (ಪರೀಕ್ಷಾಂಗ) ಮತ್ತು ಪ್ರಭಾರ ಕುಲಪತಿಗಳು ಹಾಗೂ ವಾಣಿಜ್ಯ ನಿಕಾಯದ ಡೀನರು ಆದ ಪ್ರೊ. ಆಯೀಷ ಎಂ. ಷರೀಫ್‌ರವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ನಂತರ ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಸಭೆಯಲ್ಲಿ ಮಂಡಿಸಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| **Spl. Syn. 2019/2.1** | **Promotions to University Teachers Under UGC CAS** |
| **Decision** | The recommendations of the Selection Committee and Screening cum Evaluation Committees of various subjects for promotion of teachers in respective subjects and to the higher AGP placed before the meeting (Appendix – A) are approved.<br><br>However, the Syndicate noted that the API scorings of the Selection and Screening-cum-Evaluation Committees, and authorized the Vice-chancellor to go through again the API scorings and rectify as per the UGC Regulations and its amendments issued from time to time at the time of eligibility of the candidates for promotion under CAS, if necessary.<br><br>Further, the Syndicate decided to extend the monetary benefits to the teachers who have applied/submitted their applications in prescribed form and are eligible on or before 31-12-2018 shall be applicable from 1st February 2019 or the from the date of decision of the Syndicate, whichever is later. |
| **Spl.Syn. 2019/2.2** | **ಯುವರಾಜ ಕಾಲೇಜಿನಲ್ಲಿ ನಡೆದಂತಹ ಘಟನೆಯ ಬಗೆಗೆ.** |
| | ಮಾನ್ಯ ಕುಲಪತಿಗಳು ಮಾತನಾಡಿ ದಿನಾಂಕ 15-02-2019ರಂದು ಯುವರಾಜ ಕಾಲೇಜಿನಲ್ಲಿ ರೋಹಿತ್ ಎನ್ನುವ ವಿದ್ಯಾರ್ಥಿಯು ಮೇಘನ ಎಂಬ ವಿದ್ಯಾರ್ಥಿಗೆ ಹಲ್ಲೆ ಮಾಡಿ ಗಾಯಗೊಳಿಸಿದ್ದಾನೆ ಮತ್ತು ರಕ್ಷಿಸಲು ಹೋದ ಅವಳ ಸ್ನೇಹಿತೆಗೂ ಸಹ ಹಲ್ಲೆ ಮಾಡಿರುತ್ತಾನೆ ಎಂದು ವರದಿ ಬಂದಿರುವುದಾಗಿ ಸಭೆಗೆ ತಿಳಿಸಿದರು. ಈ ಸಂಬಂಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ರೋಹಿತ್‌ನನ್ನು ಅಮಾನತು ಮಾಡಲಾಗಿದೆ ಮತ್ತು ಮೇಘನ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿರುವ ವಿಷಯವನ್ನೂ ಸಭೆಯ ಗಮನಕ್ಕೆ ತಂದರು. |

| | |
|---|---|
| | ಮಾನ್ಯ ಕುಲಸಚಿವರು ಮಾತನಾಡಿ ಯುಜಿಸಿ ನಿಯಮಾವಳಿಗಳ ಅನುಸಾರ ಎಲ್ಲಾ ಕಾಲೇಜುಗಳಲ್ಲಿ ಕಡ್ಡಾಯವಾಗಿ Anti Harasment/Anti-Ragging Committee ಯನ್ನು ರಚಿಸಿ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುವಂತೆ ಕ್ರಮಕೈಗೊಳ್ಳಬೇಕು ಮತ್ತು ಈ ರೀತಿಯ ಘಟನೆಗಳು ಜರುಗದಂತೆ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಬೇಕು. ಈ ಸಂಬಂಧ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಇವೆಲ್ಲದರ ಕ್ರೋಢೀಕೃತ ವರದಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವಂತೆ ಸೂಚಿಸಬಹುದಾಗಿದೆಯೆಂದರು. |
| ತೀರ್ಮಾನ | ಈ ರೀತಿಯ ಘಟನೆಗಳು ಮರುಕಳಿಸದಂತೆ ವಿಶ್ವವಿದ್ಯಾನಿಲಯದ ಎಲ್ಲಾ ಅಧೀನ ಕಾಲೇಜುಗಳು ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳುವ ಬಗ್ಗೆ ಸುತ್ತೋಲೆಯನ್ನು ಹೊರಡಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **Spl.Syn. 2019/2.3** | ಇವರು ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ. |
| ತೀರ್ಮಾನ | ಶ್ರೀ ಚೆನ್ನಬಸಯ್ಯ ಸಂಶೋಧನಾ ಅಭ್ಯರ್ಥಿ, ಇವರು ಹೆಚ್ಚುವರಿಯಾಗಿ ಒಂದು ತಿಂಗಳ ಕಾಲಾವಕಾಶ ಕೋರಿರುವ ಸಕಾರಣ ಮನವಿಯನ್ನು ಪುರಸ್ಕರಿಸಿದ ಸಿಂಡಿಕೇಟ್ ಸದರಿಯವರಿಗೆ ರೂ.25,000/-ಗಳ ದಂಡಶುಲ್ಕದೊಂದಿಗೆ ಸಂಶೋಧನೆಯನ್ನು ಅಂತಿಮಗೊಳಿಸಿ ಮಹಾಪ್ರಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕೆಂಬ ಷರತ್ತಿನೊಂದಿಗೆ ಒಂದು ತಿಂಗಳ ಕಾಲಾವಕಾಶವನ್ನು ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **Spl.Syn. 2019/2.4** | ದಿನಾಂಕ 05-02-2019ರಂದು ಜರುಗಿದ ವಿಶ್ವವಿದ್ಯಾನಿಲಯದ ಕಟ್ಟಡ ಸಮಿತಿ ಸಭೆಯ ನಡಾವಳಿಯನ್ನು ವಿ.ವಿ.ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ |
| ತೀರ್ಮಾನ | ದಿನಾಂಕ 05-02-2019ರಂದು ಜರುಗಿದ ವಿಶ್ವವಿದ್ಯಾನಿಲಯದ ಕಟ್ಟಡ ಸಮಿತಿ ಸಭೆಯ ನಡಾವಳಿಯನ್ನು ಸಭೆಯು ಅನುಮೋದಿಸಿತು. |
| **Spl.Syn. 2019/2.5** | ವಿಶ್ವವಿದ್ಯಾನಿಲಯದ ನೇಮಕಾತಿ ಪ್ರಾಧಿಕಾರಗಳ ಸಭೆಯಲ್ಲಿ (ನೇರನೇಮಕಾತಿ ಹಾಗೂ ಯುಜಿಸಿ-ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ) ಭಾಗವಹಿಸುವ ಶಿಕ್ಷಣ ತಜ್ಞರಿಗೆ ಸಭಾ ಭತ್ಯೆ ಹಾಗೂ ಪ್ರಯಾಣ ಭತ್ಯೆಗಳನ್ನು ಪರಿಷ್ಕರಿಸುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ನೇಮಕಾತಿ ಪ್ರಾಧಿಕಾರಗಳ ಸಭೆಯಲ್ಲಿ (ನೇರನೇಮಕಾತಿ ಹಾಗೂ ಯುಜಿಸಿ-ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ) ಭಾಗವಹಿಸುವ ಶಿಕ್ಷಣ ತಜ್ಞರಿಗೆ ಸಭಾ ಭತ್ಯೆ ಹಾಗೂ ಪ್ರಯಾಣ ಭತ್ಯೆಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |

| ಕ್ರ.ಸಂ | ಭತ್ಯೆಗಳು | ಪರಿಷ್ಕರಿಸಲಾದ ಮೊತ್ತ ರೂ.ಗಳಲ್ಲಿ |
|---|---|---|
| 1 | ಆಸನ ಭತ್ಯೆ | 3,000-00 |
| 2 | ಪ್ರಯಾಣ ಭತ್ಯೆ (ಕಾರಿನಲ್ಲಿ ಪ್ರಯಾಣಿಸಿದಲ್ಲಿ) ಯಾವುದೇ ರಸೀತಿ ಪಡೆಯದೆ) | ಕಿ.ಮೀ.ಗೆ ರೂ.10/- |
| 3 | ವಿಮಾನಯಾನ/ಬಾಡಿಗೆ ವಾಹನದಲ್ಲಿ ಪ್ರಯಾಣಿಸಿದಲ್ಲಿ (ನಿಯಮಾನುಸಾರ ಟೋಲ್ ಶುಲ್ಕ ಒಳಗೊಂಡಂತೆ ರಸೀತಿ ಮತ್ತು ಟ್ರಿಪ್ ಶೀಟ್ ಪಡೆದು) | ವಾಸ್ತವಿಕ ವೆಚ್ಚ |
| 4 | ಆಯ್ಕೆ ಸಮಿತಿಯು ಕಾರಣಾಂತರಗಳಿಂದ ರದ್ದಾದಲ್ಲಿ ಅಂತಹ ಸಂದರ್ಭದಲ್ಲಿ ಟಿಕೆಟ್ ಇತ್ಯಾದಿ ವೆಚ್ಚ ಭರಿಸಲು | ವಾಸ್ತವಿಕ ವೆಚ್ಚ |

| Spl.Syn. 2019/2.6 | ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ. |
|---|---|

ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ. ಸಂಶೋಧನಾ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಅಭ್ಯರ್ಥಿಗಳು ಪಿಹೆಚ್.ಡಿ ನಿಯಮಾವಳಿಯನ್ವಯ ಸಂಶೋಧನಾ ಅವಧಿ 07 ವರ್ಷಗಳ ಒಳಗೆ ಮಹಾ ಪ್ರಬಂಧವನ್ನು ಸಲ್ಲಿಸಲು ವಿಳಂಬವಾಗಿರುವುದರಿಂದ ಹೆಚ್ಚುವರಿ ಕಾಲಾವಕಾಶವನ್ನು ಕೋರಿರುತ್ತಾರೆ ಹಾಗೂ ಈ ಸಂಶೋಧನಾ ಅಭ್ಯರ್ಥಿಗಳಿಗೆ ಮಾರ್ಗದರ್ಶಕರು ಶಿಫಾರಸ್ಸು ಮಾಡಿರುತ್ತಾರೆ.

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು ಮತ್ತು ಪಿಹೆಚ್.ಡಿ ವಿಷಯ | ಖಾಯಂ ನೊಂದಣಿ ದಿನಾಂಕ | ಮಾರ್ಗದರ್ಶಕರ ಹೆಸರು ಮತ್ತು ವಿಭಾಗ | 07 ವರ್ಷಗಳು ಪೂರ್ಣಗೊಳ್ಳುವ ದಿನಾಂಕ | ವಿಳಂಬಕ್ಕೆ ನೀಡಿರುವ ಕಾರಣಗಳು | ಕೋರಿರುವ ಕಾಲಾವಧಿಯ ವಿವರ |
|---|---|---|---|---|---|---|
| 1 | ಮಂಜುನಾಥ ಪಿ.ಎನ್ ಜಾನಪದ | 16-03-2012 | ಡಾ.ಹೆಚ್.ಆರ್.ಚೇತನ ಸಹಾಯಕ ಪ್ರಾಧ್ಯಾಪಕರು ಮಹಾರಾಜ ಕಾಲೇಜು, ಮೈಸೂರು | 16-03-19 | ಅನಾರೋಗ್ಯದ ನಿಮಿತ್ತ 06 ತಿಂಗಳ ಹೆಚ್ಚುವರಿ ಕೋರಿದ್ದಾರೆ. | 06 ತಿಂಗಳು |
| 2 | ಶಿವಮಾದಯ್ಯ .ಡಿ ಜಾನಪದ | 12-03-2012 | ಡಾ.ಹೆಚ್.ಆರ್.ಚೇತನ ಸಹಾಯಕ ಪ್ರಾಧ್ಯಾಪಕರು ಮಹಾರಾಜ ಕಾಲೇಜು, ಮೈಸೂರು | 16-03-2019 | ಅನಾರೋಗ್ಯದ ನಿಮಿತ್ತ 06 ತಿಂಗಳ ಹೆಚ್ಚುವರಿ ಕೋರಿದ್ದಾರೆ. | 06 ತಿಂಗಳು |
| 3 | ಚಂದ್ರಮೌಳಿ.ಎಸ್.ವಿ ಭಾಷಾವಿಜ್ಞಾನ | 16-03-2012 | ಡಾ. ಎಲ್.ರಾಮಮೂರ್ತಿ ಸಿ.ಐ.ಐ.ಎಲ್, ಮಾಗಂಮ್ಮೆ | 16-03-2019 | ಅನಾರೋಗ್ಯದ ನಿಮಿತ್ತ 06 ತಿಂಗಳ ಹೆಚ್ಚುವರಿ ಕೋರಿದ್ದಾರೆ | 06 ತಿಂಗಳು |
| 4 | ಶಿವಾನಂದ ಡಿ.ಇ ಜಾನಪದ | 16-03-2012 | ಡಾ.ಹೆಚ್.ಆರ್.ಚೇತನ ಸಹಾಯಕ ಪ್ರಾಧ್ಯಾಪಕರು ಮಹಾರಾಜ ಕಾಲೇಜು, ಮೈಸೂರು | 16-03-2019 | ಅನಾರೋಗ್ಯದ ನಿಮಿತ್ತ 02 ತಿಂಗಳ ಹೆಚ್ಚುವರಿ ಕೋರಿದ್ದಾರೆ | 02 ತಿಂಗಳು |
| 5 | ನಾಗರಾಜ.ಎಂ ಪ್ರಾಣಿಶಾಸ್ತ್ರ | 13-02-2012 | ಡಾ.ಸುಕುಮಾರ್ ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ, ಆರ್.ಐ.ಇ, ಮಾಗಂಮ್ಮೆ | 13-02-2019 | ಅನಾರೋಗ್ಯದ ನಿಮಿತ್ತ 03 ತಿಂಗಳ ಹೆಚ್ಚುವರಿ ಕೋರಿದ್ದಾರೆ | 03 ತಿಂಗಳು |

| ತೀರ್ಮಾನ : | ಸಂಶೋಧನೆಯನ್ನು ಅಂತಿಮಗೊಳಿಸಿ ಮಹಾಪ್ರಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕೆಂಬ ಷರತ್ತಿನೊಂದಿಗೆ ಪ್ರತಿ ವಿದ್ಯಾರ್ಥಿಗೆ ರೂ.25,000/-ಗಳ ದಂಡ ಶುಲ್ಕದೊಂದಿಗೆ ಅವರು ಕೋರಿರುವ ಕಾಲಾವಕಾಶವನ್ನು ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
|---|---|

**ಇತರೆ ವಿಷಯಗಳು:**

- Circular to be issued regarding to conduct Practical & Tutorial classes in the departments and also to conduct Half-a-day Workshop in this regard.
- SWAYAM online coursesಅನ್ನು ಮುಂಬರುವ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ತೀರ್ಮಾನಿಸಲಾಯಿತು.

- ಮಾನ್ಯ ಕುಲಪತಿಗಳ ಶೈಕ್ಷಣಿಕ ಕಾರ್ಯಗಳಲ್ಲಿ ಸಹಾಯ ಮಾಡುವ ಉದ್ದೇಶದಿಂದ ಒಬ್ಬ ಬೋಧಕ ಉದ್ಯೋಗಿಯನ್ನು ವಿಶೇಷ ಅಧಿಕಾರಿಯ ನೇಮಕ ಮಾಡಲು ಸಭೆಯು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

- ಕಂಪ್ಯೂಟರ್ ವಿಭಾಗಕ್ಕೆ ಸೂಪರ್ ಕಂಪ್ಯೂಟರ್ ತರಬೇತಿ ನೀಡಲು ಒಬ್ಬರು ಮಾರ್ಗದರ್ಶಕರನ್ನು ನೇಮಕ ಮಾಡಲು ಸಭೆಯು ಅನುಮತಿಸಿತು.

ಕೊನೆಯಲ್ಲಿ, ಅಧ್ಯಕ್ಷರು ಹಾಗೂ ಮಾನ್ಯ ಕುಲಪತಿಗಳು ಸಭೆಯಲ್ಲಿ ಭಾಗವಹಿಸಿದಂತಹ ಸದಸ್ಯರುಗಳಿಗೆ ವಂದನೆಗಳನ್ನು ತಿಳಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ**

**ಕುಲಪತಿ ಮತ್ತು ಅಧ್ಯಕ್ಷರು**